**ಚಾಸಾಃ 1  ಪ್ರಾಸಾಃ 1**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 516/2025**

| | |
|---|---|
| ಹೆಸರು | : ಅಬ್ದುಲ್ ರಹೀಮ್ |
| ತಂದೆಯ ಹೆಸರು | : ಸೈದು |
| ಪ್ರಾಯ | : 40 ವರ್ಷ |
| ಉದ್ಯೋಗ | : ವ್ಯವಹಾರ |
| ವಾಸ | : ಗೂನಡ್ಕ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 06.01.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನನಗೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತನ ಪರಿಚಯ ಇದೆ. ಚಾಸಾ-2, 3 ರವರ ಪರಿಚಯ ಇದೆ. ಚಾಸಾ-4 ನನ್ನ ಅಣ್ಣ. ನನ್ನ ಅಣ್ಣ ಚಾಸಾ-4 ರವರಿಗೆ ಗೂನಡ್ಕದ ಸ.ನಂಃ 104/1C3 ನಲ್ಲಿ 85 ಸೆಂಟ್ಸ್ ಜಾಗ ಇರುತ್ತದೆ. ಸದರಿ ಜಾಗದಲ್ಲಿ ಸಭಾಭವನ ಇರುತ್ತದೆ.

ದಿ. 23.3.2025ರಂದು ಬೆಳಿಗ್ಗೆ 9 ಗಂಟೆಯಿಂದ 24.3.2025 ರ ಮಧ್ಯದಲ್ಲಿ ಚಾಸಾ-4 ರವರ ಜಾಗದ ಪಕ್ಕದವರಾದ ಆರೋಪಿ ಸನತ್ ಕುಮಾರ್ ರವರು ಟಿಪ್ಪರ್ ನಲ್ಲಿ ಮಣ್ಣು ಸಾಗಾಟ ಮಾಡುವಾಗ ನಮ್ಮ ಅಣ್ಣನವರ ಜಾಗದಲ್ಲಿರುವ ಸಭಾಭವನದ ಆವರದಲ್ಲಿ ಇಂಟರ್ ಲಾಕ್ ಅಳವಡಿಸಿರುವ ಜಾಗದಲ್ಲಿ ಚಾಸಾ-4ರವರ ಅನುಮತಿ ಪಡೆಯದೇ ಅಕ್ರಮವಾಗಿ ಮಣ್ಣನ್ನು ಸಾಗಾಟ ಮಾಡುವಾಗ ಆವರಣದಲ್ಲಿ ಅಳವಡಿಸಿದ್ದ

ಇಂಟರ್ ಲಾಕ್ ಹೊಡೆದು ರೂ.1 ಲಕ್ಷ ನಷ್ಟವಾಗಿರುತ್ತದೆ. ಮಾರನೇ ದಿನ ನಾನು ಸ್ಥಳಕೆಕ ಹೋಗಿ ಅದನ್ನು ಪರಿಶೀಲನೆ ಮಾಡಿ ಅಲ್ಲಿ ಕೆಲಸ ಮಾಡುವ ಚಾಸಾ-3 ರವರನ್ನು ವಿಚಾರಿಸಿದಾಗ ಕೆಎ-21-ಸಿ-2785 ಟಿಪ್ಪರ್ ನಲ್ಲಿ ಮಣ್ಣು ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನಾನು ಚಾಸಾ-4 ರವರಿಗೆ ತಿಳಿಸಿರುತ್ತೇನೆ. ಅವರು ತಿಳಿಸಿದ ಪ್ರಕಾರ ದಿ. 4.4.2025 ರಂದು ಸುಳ್ಯ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ನೀಡಿದ ನಂತರ ದಿ. 5.4.2025 ರಂದು ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ-6 ಮತ್ತು 7 ರವರು ಸ್ಥಳದಲ್ಲಿ ಹಾಜರಿದ್ದರು. ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿ ಅದಕ್ಕೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಸ್ಥಳದಲ್ಲಿ ನಕ್ಷೆ ತಯಾರಿಸಿರುತ್ತಾರೆ. ಸದರಿ ನಕ್ಷೆಯನ್ನು ನೋಡುತ್ತಿದ್ದು ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಆರೋಪಿ ತಮ್ಮ ತೋಟದಲ್ಲಿರುವ ಕೆರೆಯನ್ನು ಮುಚ್ಚಲು ಮಣ್ಣನ್ನು ಸಗಾಟ ಮಾಡಿರುತ್ತಾರೆ. ಘಟನೆ ಕುರಿತು ನಾನು ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಪಂಚನಾಮೆ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ**

ಸದರಿ ಜಾಗ ನನ್ನ ಅಣ್ಣನಿಗೆ ಸೇರಿದ್ದು ಎಂಬ ಬಗ್ಗೆ ನಾವು ಪಹಣಿ ಪತ್ರಿಕೆಯನ್ನು ಪೊಲೀಸರಿಗೆ ನೀಡಿರುತ್ತೇವೆ. ನನ್ನ ಅಣ್ಣ ಚಾಸಾ–4 2020 ರಲ್ಲಿ ಸಭಾಭವನ ಪ್ರಾರಂಭಿಸಿರುತ್ತಾರೆ. ಅಲ್ಲಿ ಸಂಪೂರ್ಣ ಕೆಲಸಗಳು ಮುಗಿದ ನಂತರ ಕಾರ್ಯ ಕ್ರಮಗಳು ಪ್ರಾರಂಭವಾಗಿರುತ್ತದೆ. ಕಟ್ಟಡದಿಂದ 40 ರಿಂದ 50 ಅಡಿ ಅಗಲದವರೆಗೆ ಇಂಟರ್ ಲಾಕ್ ಹಾಕಿರುತ್ತೇವೆ. ಅದರಲ್ಲಿ ರಸ್ತೆಯೂ ಸಹ ಬರುತ್ತದೆ. ಅದು 60 ಎಂ.ಎಂ ದಪ್ಪ ಇರುವ ಇಂಟರ್ ಲಾಕ್ ಆಗಿರುತ್ತದೆ. ಸಾಮಾನ್ಯವಾಗಿ ವಾಹನಗಳು ಓಡಾಡುವ ರಸ್ತೆಗೆ 80 ಎಂ.ಎಂ ದಪ್ಪದ ಇಂಟರ್ ಲಾಕ್ ಹಾಕಬೇಕಾಗುತ್ತದೆ ಎಂದರೆ ಸರಿ. ಅದು ಹುಡಿಯಾಗುತ್ತದೆ ಎಂಬ ಕಾರಣಕ್ಕೆ 80 ಎಂ.ಎಂ ದಪ್ಪದ ಇಂಟರ್ ಲಾಕ್ ಹಾಕಬೇಕು ಎಂದರೆ ಸರಿ. ಕಲ್ಲುಗುಂಡಿ ಕಡೆ ಹೋಗುವ ರಸ್ತೆಯ ಬದಿಗೆ ನಮ್ಮ ಸಭಾಭವನ ಇರುತ್ತದೆ ಎಂದರೆ ಸರಿ. ಸದರಿ ಸಭಾಭವನಕ್ಕೆ ತಾಗಿಕೊಂಡು ನಮ್ಮ ಇಂಟರ್ ಲಾಕ್ ಘಟಕ ಇರುತ್ತದೆ ಎಂದರೆ ಸರಿ. ನಿಪಿ–4 ಭಾವಚಿತ್ರದಲ್ಲಿ ಕಾಣುವ ಅಂಗಳದವರೆಗೆ ನಮ್ಮ ಇಂಟರ್ ಲಾಕ್ ಘಟಕ್ಕೆ ಬರುವ ವಾಹನಗಳು ಬರುತ್ತವೆ ಎಂದರೆ ಸರಿಯಲ್ಲ. ನಿಪಿ–4 ರಲ್ಲಿ ಕಾಣುವ ಕಾಂಪೌಂಡನ್ನು ಹೊಸದಾಗಿ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿ. ಸದರಿ ಕಾಂಪೌಂಡ್ ಚಾಸಾ–4 ಮತ್ತು ಮಾಧವ ಗೌಡರವರ ಆಸ್ತಿಯ ಮಧ್ಯೆ ಇರುತ್ತದೆ. ಸದರಿ ಕಾಂಪೌಂಡ್ ಸುಮಾರು 40 ರಿಂದ 50 ಅಡಿ ಉದ್ದ ಇರುತ್ತದೆ. ಸದರಿ ಕಾಂಪೌಂಡ್ ನಂತರ ಆರೋಪಿಯ ಜಮೀನು ಇರುತ್ತದೆ ಎಂದರೆ ಸರಿ. ಆರೋಪಿ ಮತ್ತು ನಮ್ಮ ಜಮೀನಿನ ನಂತರ ಒಂದು ದೊಡ್ಡ ತೋಡು ಇದೆ ಎಂದರೆ ಸರಿ. ನಮ್ಮ ಜಮೀನಿನ ದಕ್ಷಿಣಕ್ಕೆ ಸದರಿ ತೋಡು ಬರುತ್ತದೆ ಎಂದರೆ ಸರಿ. ನಮ್ಮ ಜಾಗದಿಂದ ತೋಡು ಇಳಿಜಾರು ಇರುತ್ತದೆ ಎಂದರೆ ಸರಿ. ಮಳೆಗಾಲದಲ್ಲಿ ನೀರು ಹೆಚ್ಚಾದಾಗ ನಮ್ಮ ಜಮೀನಿಗೆ ಬರುತ್ತದೆ ಎಂದರೆ ಸರಿ. ಸದರಿ ನೀರು ನಮ್ಮ ಸಭಾಭವನದ ತನಕ ಬರುತ್ತದೆ ಎಂದರೆ ಸರಿಯಲ್ಲ. ಒಂದು ಸಲ ಮಾತ್ರ ಬಂದಿತ್ತು. ನಮ್ಮ ಜಮೀನಿನ ದಕ್ಷಿಣ ಭಾಗದಲ್ಲಿ

ಸಾಮಾನ್ಯವಾಗಿ ನೀರು ಬರುತ್ತದೆ ಎಂದರೆ ಸರಿ. ಸಭಾಭವನ ಕಟ್ಟುವ ಮೊದಲು ಅದು ಗದ್ದೆ ಜಾಗ ಎಂದರೆ ಸರಿ. ದಿ. 13.3.2025 ರಲ್ಲಿ ನಮ್ಮ ಮತ್ತು ಮಾಧವಗೌಡ ಮತ್ತು ಅರೋಪಿ ನಡುವೆ ಮೇಲೆ ಹೇಳಿದ ಕಲ್ಲಿನ ಕಾಂಪೌಂಡ್ ನಿರ್ಮಾಣ ಮಾಡಿರುತ್ತೇವೆ ಎಂದರೆ ಸರಿ. ಅದು ಕೆಂಪು ಕಲ್ಲಿನ ಕಾಂಪೌಂಡ್ ಎಂದರೆ ಸರಿ. ಅದೇ ರೀತಿ ನಮ್ಮ ಆಸ್ತಿಯ ದಕ್ಷಿಣಕ್ಕೆ ಸಹ ಕಲ್ಲಿನ ಕಾಂಪೌಂಡ್ ಕಟ್ಟಿದ್ದೇವೆ ಎಂದರೆ ಸರಿ. ಅಂದರೆ 13.3.2025 ರ ಸಮಯದಲ್ಲಿ ನಮ್ಮ ಆಸ್ತಿಗೆ ಆರೋಪಿಯ ಜಮೀನಿನ ಕಡೆಗೆ ಸುಮಾರು 40% ಜಾಗ ಉಳಿದು, ಉಳಿದ ಜಾಗಕ್ಕೆ ಕಾಂಪೌಂಡ್ ನಿರ್ಮಾಣ ಆಗಿರುತ್ತದೆ. ಕಾಂಪೌಂಡ್ ಕಟ್ಟುವ ಸಮಯದಲ್ಲಿ ಹೊಳೆ ಬದಿಯಲ್ಲಿ ಸಣ್ಣ ಜೆ.ಸಿ.ಬಿ ಮೂಲಕ ಜಾಗ ಹದ ಮಾಡಿರುತ್ತೇವೆ. ಹಾಗೆ ಸುಮಾರು 4 ರಿಂದ 5 ಅಡಿ ಎತ್ತರದ ಕಾಂಪೌಡ್ ನಿರ್ಮಾಣ ಮಾಡಿರುತ್ತೇವೆ. ಅದು ಸುಮಾರು 180 ಅಡಿ ಉದ್ದ ಇರುತ್ತದೆ. ಅದಕ್ಕೆ ಸುಮಾರು 10 ಲೋಡ್ ಕಲ್ಲು ಉಪಯೋಗಿಸಿದ್ದೇವೆ ಎಂದರೆ ಸರಿ. ಅದನ್ನು ಸ್ವಲ್ಪ ಸ್ವಲ್ಪ ತಂದಿರುತ್ತೇವೆ. ಕಬ್ಬಿಣ ಮತ್ತು ಸಿಮೆಂಟನ್ನು ಪಿಕ್‌ಅಪ್ ಮೂಲಕ ಸ್ಥಳಕ್ಕೆ ತಂದಿರುತ್ತೇವೆ. ಅಲ್ಲಿ ಒಂದು ಬೋರ್ ತೆಗೆದಿದ್ದೇವೆ ಎಂದರೆ ಸರಿ. ಅದು ಇಂಟರ್ ಲಾಕ್ ಹಾಕುವ ಮೊದಲು ತೆಗೆದಿರುತ್ತೇವೆ. ಅದನ್ನು 2021 ರಲ್ಲಿ ತೆಗೆದಿರಬಹುದು. ನಾವು 2025 ಮಾರ್ಚ್ ತಿಂಗಳಿನಲ್ಲಿ ಸದರಿ ಬೋರ್ ತೆಗೆದಿರುತ್ತೇವೆ ಎಂದರೆ ಸರಿಯಲ್ಲ.

ಸಭಾಭವನಕ್ಕೆ ಶಾಮಿಯಾನ ಮತ್ತು ಡೆಕೋರೇಷನ್ ವಾಹನಗಳು ಬರುತ್ತವೆ ಎಂದರೆ ಸರಿಯಲ್ಲ. ನಮ್ಮಲ್ಲೇ ಸದರಿ ವಸ್ತುಗಳು ಇರುತ್ತವೆ. ಪಾರ್ಕಿಂಗ್‌ಗೆ ನೂರಾರು ವಾಹನಗಳು ಬರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಗದ್ದೆ ಜಾಗದಲ್ಲಿ ಇಂಟರ್ ಲಾಕ್ ಮಾಡಿದಾಗ ಅದು ಕೆಳಗೆ ಜಗ್ಗುತ್ತದೆ ಎಂದರೆ ನಾವು 4 ಅಡಿವರೆಗೆ ಮಣ್ಣು ಮತ್ತು ಕಲ್ಲು ಹಾಕಿ ಗಟ್ಟಿ ಮಾಡಿರುತ್ತೇವೆ. ಸಭಾಭವನ ಕಟ್ಟುವ ಮೊದಲೇ ಗಟ್ಟಿ ಮಾಡಿರುತ್ತೇವೆ. ಕೆಂಪು ಕಲ್ಲುಗಳು ಮತ್ತು ಕರ್ಗಲ್ಲುಗಳು ಟಿಪ್ಪರ್ ಲಾರಿಯಲ್ಲಿ ಬರುತ್ತವೆ ಎಂದರೆ ಸರಿ. ನಮ್ಮ ಅಣ್ಣನವರ ಸಾಹಿತ್ಯ ಸಮ್ಮೇಳನ ಆಗುವಾಗ ಆರೋಪಿ ನಮ್ಮೊಟ್ಟಿಗೆ ಇದ್ದು ಸಹಕರಿಸಿರುತ್ತಾರೆ ಎಂದರೆ ಸರಿ. ನಾವು ಮತ್ತು ಆರೋಪಿ ಪರಸ್ಪರ ಸಹಾಯ ಮಾಡಿಕೊಂಡು ಇರುತ್ತಿದ್ದೆವು

ಎಂದರೆ ಸರಿ. ನನಗೆ ಟಿ.ಎಂ.ಶಹೀದ್ ರವರ ಪರಿಚಯ ಇದೆ. ನಾನು ಅವರು ಸ್ನೇಹಿತರು ಎಂದರೆ ಸರಿಯಲ್ಲ. ನಮ್ಮ ಜಾಗದಿಂದ ಸುಮಾರು 500 ಮೀ ದೂರದಲ್ಲಿ ಟಿ.ಎಂ. ಶಹೀದ್ ರವರ ಜಾಗ ಇರುತ್ತದೆ ಎಂದರೆ ಸರಿ. ಅದು ಗುಡ್ಡೆ ಜಾಗ. ನಾವು ಮತ್ತು ಆರೋಪಿ ಚೆನ್ನಾಗಿದ್ದ ಕಾರಣಕ್ಕೆ ಒಟ್ಟಿಗೆ ಮಾತನಾಡಿ ಟಿ.ಎಂ. ಶಹೀದ್ ರವರ ಜಾಗದಿಂದ ಮಣ್ಣು ತರಲು ಮಾತನಾಡಿದ್ದೆವು ಎಂದರೆ ಸರಿಯಲ್ಲ.

ಆರೋಪಿ ಸುಮಾರು 80 ರಿಂದ 100 ಲೋಡ್ ಮಣ್ಣು ಸಾಗಾಟ ಮಾಡಿರುತ್ತಾರೆ. ನಮ್ಮ ಕೆಲಸಗಾರರು ಒಂದು ಟಿಪ್ಪರನ್ನು ನೋಡಿರುತ್ತಾರೆ. ನಮ್ಮ ಹಾಲ್ ನಲ್ಲಿ ಸಿಸಿ ಕ್ಯಾಮರಾ ಇದೆ. ಸಿಸಿ ಕ್ಯಾಮರಾವನ್ನು ಸಾಮಾನ್ಯವಾಗಿ ಮೊಬೈಲ್ ಗೆ ಕನೆಕ್ಟ್ ಮಾಡಿದ್ದೇವೆ ಎಂದರೆ ಸರಿ. ಆರೋಪಿ ಎರಡು ದಿನ ಕಾಲ ಮಣ್ಣು ಸಾಗಾಟ ಮಾಡುವ ವರೆಗೆ ನಾವು ತಕರಾರು ಮಾಡಿಲ್ಲ ಎಂದರೆ ಸರಿ. ಸದರಿ ವಿಚಾರ ನಮಗೆ ಗೊತ್ತಿಲ್ಲದ ಕಾರಣ ನಾವು ತಕರಾರು ಮಾಡಿರುವುದಿಲ್ಲ. ಆರೋಪಿ ಮಣ್ಣು ಸಾಗಾಟ ಮಾಡಿರುವ ಬಗ್ಗೆ ನಮ್ಮ ಕೆಲಸಗಾರರು ಸಹ ನಮಗೆ ಫೋನ್ ಮಾಡಿ ತಿಳಿಸಿರುವುದಿಲ್ಲ. ಲಾರಿ ಹೋಗಿ ಬರುವ ಸಿಸಿ ಟಿ.ವಿ ಪೂಟೇಜ್ ಗಳನ್ನು ನಾನು ಮೊಬೈಲ್ ನಲ್ಲಿ ನೋಡಿರುವುದಿಲ್ಲ. ಆ ಸಮಯದಲ್ಲಿ ಸಿಸಿ ಟಿವಿ ವರ್ಕ್ ಆಗುತ್ತಿರಲಿಲ್ಲ. ಸಿಸಿ ಟಿ.ವಿ ಇರುವ ಬಗ್ಗೆ ಪೊಲೀಸರು ಕೇಳಿರುವುದಿಲ್ಲ. ಘಟನೆ ಕುರಿತು ನನಗೆ ದಿ. 25.3.2025 ರಂದು ಗೊತ್ತಾಗಿರುತ್ತದೆ. ಆ ದಿನ ನಾನು ದೂರು ನೀಡಿರುವುದಿಲ್ಲ. ಚಾಸಾ-4ರವರ ಜೊತೆ ಮಾತನಾಡಿ ದಿ. 4.4.2025 ರಂದು ದೂರು ನೀಡಿರುತ್ತೇನೆ. ನಿಪಿ-4 ಮತ್ತು 5ರಲ್ಲಿ ಸ್ವಲ್ಪ ಜಗ್ಗಿದ ಹಾಗೆ ಮಾತ್ರ ಕಾಣುತ್ತದೆ ಎಂದರೆ ಸರಿಯಲ್ಲ. ಬ್ರೇಕ್ ಆಗಿರುತ್ತದೆ. ಬ್ರೇಕ್ ಆಗಿಲ್ಲ ಎಂದರೆ ಸರಿಯಲ್ಲ.

ಹಿಟಾಚಿಯನ್ನು ಲಾರಿಯಲ್ಲಿ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಮ್ಮ ಎಲ್ಲಾ ವಾಹನಗಳು ಅದೇ ರಸ್ತೆಯಲ್ಲಿ ಹೋಗಬೇಕು ಎಂದರೆ ಸರಿ. ಅದೇ ರಸ್ತೆಯಲ್ಲಿ ಕಲ್ಲು ಸಿಮೆಂಟ್ ಗಳನ್ನು ಸಾಗಾಟ ಮಾಡಿರುತ್ತೇವೆ ಎಂದರೆ ಸರಿ. ಸಣ್ಣ ವಾಹನದಲ್ಲಿ ಸಾಗಾಟ ಮಾಡಿರುತ್ತೇವೆ. ನಿಪಿ-4 ಮತ್ತು 5ನ್ನು ಪಂಚನಾಮೆ ಕಾಲಕ್ಕೆ

ಯಥಾಸ್ಥಿತಿಯಲ್ಲಿ ತೆಗೆಯಲಾಗಿರುತ್ತದೆ. ಮೈಸೂರು ಮಡಿಕೇರಿ ರಸ್ತೆಯಿಂದ ನಮ್ಮ ಅಂಗಳಕ್ಕೆ ಬರಲು 100 ಅಡಿ ಉದ್ದದ ರಸ್ತೆ ಇರುತ್ತದೆ. ಸದರಿ ರಸ್ತೆ ಇಳಿಜಾರಾಗಿರುತ್ತದೆ ಎಂದರೆ ಸರಿ. ಅಂಗಳದಲ್ಲಿ ಸಮತಟ್ಟಾಗಿದೆ ಎಂದರೆ ಸರಿ. ಇಂಟರ್ ಲಾಕ್ ನಲ್ಲಿ ಬಿದ್ದ ನೀರು ಅಂಗಳಕ್ಕೆ ಬರುತ್ತದೆ ಎಂದರೆ ಸರಿ. ಇಂಟರ್ ಲಾಕ್ ತಯಾರಿಸಲು ಸಿಮೆಂಟ್, ಜಲ್ಲಿ ಮತ್ತು ಕಲ್ಲಿನ ಹುಡಿ ಬೇಕಾಗುತ್ತದೆ. ನಮ್ಮ ಸಭಾಭವನಕ್ಕೆ ಬರುವ ರಸ್ತೆ ಸಮಾರು 12 ಅಡಿ ಅಗಲ ಇರುತ್ತದೆ. ನಾವು ಸದರಿ ಜಾಗದ ಮೂಲಕವೇ ನಮ್ಮ ಇಂಟರ್ ಲಾಕ್ ಘಟಕಕ್ಕೆ ಬರಬೇಕು ಎಂದರೆ ಸರಿಯಲ್ಲ. 12 ಅಡಿ ಅಗಲದ ರಸ್ತೆಯಲ್ಲಿ ಲಾರಿಗಳು ತಿರುವು ಪಡೆದುಕೊಳ್ಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ರಸ್ತೆ ಪ್ರಾರಂಭದಿಂದಲೇ ಕಾಂಪೌಡ್ ಇರುತ್ತದೆ ಎಂದರೆ ಸರಿಯಲ್ಲ. ಸಭಾಭವನದ ಅಂಗಳದಲ್ಲಿ ನಮ್ಮ ಇಂಟರ್ ಲಾಕ್ ಗಳನ್ನು ಸ್ಟಾಕ್ ಮಾಡಿದ್ದೇವೆ ಎಂದರೆ ಸರಿಯಲ್ಲ. ಅದುಫ್ಯಾಕ್ಟರಿ ಆವರಣದಲ್ಲಿರುತ್ತದೆ. ಇಂಟರ್ ಲಾಕ್ ಫ್ಯಾಕ್ಟರಿ ಗೆ ಬರುವ ಎಲ್ಲಾ ವಾಹಗಳು ನಮ್ಮ ಸಭಾವವನಕ್ಕೆ ಬರುವ ರಸ್ತೆಯಿಂದಲೇ ಬರುತ್ತವೆ ಎಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿಯ ಜಮೀನಿನ ಗಡಿಯಲ್ಲಿ ನಿರ್ಮಾಣ ಮಾಡಿರುವ ಕಲ್ಲಿನ ಗೋಡೆಗಳು ಇಬ್ಬರಿಗೂ ರಕ್ಷಣೆ ಗೋಡೆಯಾಗಿರುತ್ತದೆ ಎಂದರೆ ಸರಿ. ಅದು 5 ಅಡಿ ಎತ್ತರ ಇರುತ್ತದೆ. ಸದರಿ ಕಾಂಪೌಂಡ್ ನಿರ್ಮಾಣದ ವಿಚಾರವಾಗಿ ನಾವು ಆರೋಪಿ 1 ಲಕ್ಷ ಹಣ ಕೊಡಬೇಕು ಎಂದು ಮಾತುಕತೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆದರೆ ಆರೋಪಿ 1 ಲಕ್ಷ ಕೊಡುವುದಾಗಿ ಹೇಳಿದ್ದರು. ಸದರಿ ಹಣದ ವಿಚಾರವರಾಗಿ ನಮ್ಮ ಮತ್ತು ಆರೋಪಿಯ ನಡುವೆ ವಿವಾದ ಆಗಿರುತ್ತದೆ ಎಂದರೆ ಸರಿಯಲ್ಲ. ಕಾಂಪೌಂಡಿನ ವಿಚಾರವಾಗಿ ನಾವು ಕೇಳಿದಷ್ಟು ಹಣ ಕೊಡದೇ ಇರುವ ಕಾರಣ ನಮ್ಮಲ್ಲಿ ಮಾತುಕತೆ ಮುರಿದಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಉಳಿಕೆ ಕಾಂಪೌಂಡ್ ಕೆಲಸ ನಿಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನಮ್ಮ ಜಮೀನಿನ ನಡುವೆ ಉಳಿಕೆ ಕಾಂಪೌಂಡ್ ನಿರ್ಮಾಣದ ವಿಚಾರವಾಗಿ ತಕರಾರು ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಇಂಟರ್ ಲಾಕ್ ಹೊಡೆದ ಕಾರಣ ಮತ್ತು ಈ ಪ್ರಕರಣದ ದಾಖಲು ಮಾಡಿದ

ಕಾರಣ ಉಳಿದ ಕಾಂಪೌಂಡ್ ಕೆಲಸ ನಿಲ್ಲಿಸಿರುತ್ತೇವೆ. ಕಾಂಪೌಂಡ್ ನಿರ್ಮಾಣದ ಖರ್ಚು ಕೊಡುವ ವಿಚಾರವಾಗಿ ನಮ್ಮಲ್ಲಿ ವಿವಾದ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

ಸಿದ್ದಿಕ್ ಕೊಕ್ಕೋ ರವರು ನನ್ನ ಜೊತೆ ದೂರು ನೀಡಲು ಪೊಲೀಸ್ ಠಾಣೆಗೆ ಬಂದಿದ್ದರು. ಘಟನೆ ವಿಚಾರವಾಗಿ ಮುರಳೀದರ್ ಮತ್ತು ಟಿ.ಎಂ.ಶಹೀದ್ ರವರು ಆರೋಪಿ ಪರ ನಮ್ಮ ಬಳಿ ಮಾತುಕತೆಗೆ ಬಂದಿದ್ದರು. ಟಿ.ಎಂ.ಶಹೀದ್ ರವರ ಜಾಗದಿಂದಲೇ ಆರೋಪಿ ಮಣ್ಣು ತೆಗೆಯಲು ನಾವೆಲ್ಲಾ ಒಪ್ಪಿದ್ದೇವೆ ಎಂದರೆ ಸರಿಯಲ್ಲ. ಮೂಸನ್ ರವರು ನನಗೆ ಪರಿಚಯದವರು. ಚಾಸಾ–3 ನಮ್ಮಲ್ಲಿ ಕೆಲಸ ಮಾಡುತ್ತಾರೆ. ಚಾಸಾ–6 ನನ್ನ ಪರಿಚಯದವರು ಎಂದರೆ ಸರಿ. ಚಾಸಾ–7 ನಮ್ಮ ಇಂಟರ್ ಲಾಕ್ ಘಟಕದ ಕೆಲಸಗಾರರು ಎಂದರೆ ಸರಿ. ಚಾಸಾ–8 ನನ್ನ ಪರಿಚಯದವರು. ಆರೋಪಿ ನನ್ನ ಮತ್ತು ನನ್ನ ಅಣ್ಣನ ಅನುಮತಿ ಮೇರೆಗೆ ಮಣ್ಣು ಸಾಗಾಟ ಮಾಡಿದ್ದಾನೆ ಎಂದರೆ ಸರಿಯಲ್ಲ. ಆ ರೀತಿ ಮಣ್ಣು ಸಾಗಾಟದಿಂದ ಸಭಾಭವನದ ಆವರಣದಲ್ಲಿ ಇಂಟರ್ ಲಾಕ್ ಜಗ್ಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಜಾಗದಲ್ಲಿ ಕಾಂಪೌಂಡ್ ನಿರ್ಮಾಣ ಮಾಡುವ ಸಮಯದಲ್ಲಿ ಕಲ್ಲು, ಸಿಮೆಂಟ್ ಜಲ್ಲಿ ಸಾಗಾಟ ಮಾಡಿದ್ದು, ಆ ಕಾರಣಕ್ಕೆ ಇಂಟರ್ ಲಾಕ್ ಜಗ್ಗಿರುತ್ತದೆ ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಮಣ್ಣು ಸಾಗಾಟ ಮಾಡಿದ್ದರಿಂದ ಇಂಟರ್ ಲಾಕ್ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಇಂಟರ್ ಲಾಕ್ ಜಗ್ಗಿದಾಗ ಅದನ್ನು ತೆಗೆದು ಅದಕ್ಕೆ ಮರಳು ಹಾಕಿ ಅದನ್ನು ಸಮತಟ್ಟು ಮಾಡಬಹುದು ಎಂದರೆ ಸರಿ. ಟಿ.ಎಂ.ಶಹೀದ್‌ರವರು ಪ್ರಭಾವಿ ರಾಜಕಾರಣಿ ಎಂದರೆ ಸರಿ. ನಾನು ಹೇಳಿದ ರೀತಿಯಲ್ಲಿ ಒಂದು ಲಕ್ಷ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪೊಲೀಸರು ಸೇರಿ ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ–4 ಮತ್ತು ಆರೋಪಿ ನಡುವೆ ಮಾತುಕತೆ ಚೆನ್ನಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅವರು ಮಾತನಾಡಿಕೊಳ್ಳುವ ಬಗ್ಗೆ ನನಗೆ ಗೊತ್ತಿಲ್ಲ. ನಾನೇ ವೈಯಕ್ತಿಕವಾಗಿ ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಪಂಚನಾಮೆಯನ್ನು ಪೊಲೀಸ್ ಕಾನ್ಸ್ ಟೇಬಲ್ ಬರೆದಿರುತ್ತಾರೆ. ಆವರ ಹೆಸರು ನನಗೆ ಗೊತ್ತಿಲ್ಲ. ನಾನು ದೂರು ನೀಡಿದ ವಿಚಾರವಾಗಿ ಮತ್ತು ಮುಚ್ಚಳಿಕೆ ಬರೆದುಕೊಡುವ ಸಲುವಾಗಿ ಪೊಲೀಸ್ ಠಾಣೆಗೆ ಹೋಗಿದ್ದೆ. ಚಾಸಾ-6 ಮತ್ತು 7 ರವರನ್ನು ಪೊಲೀಸರು ಸ್ಥಳಕ್ಕೆ ಕರೆಸಿರುತ್ತಾರೆ. ಚಾಸಾ-6 ರವರನ್ನು ಪೊಲೀಸರು ಕರೆಸಿರುತ್ತಾರೆ. ಪಂಚನಾಮೆ ಮತ್ತು ಕಚ್ಚಾನಕಾಶೆಯನ್ನು ಪೊಲೀಸರು ಠಾಣೆಯಲ್ಲಿ ತಯಾರಿಸಿದ್ದು ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-4 ಮತ್ತು 5 ನ್ನು ಪೊಲೀಸರು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದೂರು ನೀಡಲು ನ್ನನ ಅಣ್ಣ ಹೇಳಿಲ್ಲ ಮತ್ತು ಅಧಿಕಾರ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಕಾಂಪೌಂಡ್ ನಿರ್ಮಾಣ ಮಾಡಲು ಹಣ ನೀಡಿಲ್ಲ ಎಂಬ ಕಾರಣಕೆಕ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವತ್ತೂ ಅಕ್ರಮ ಪ್ರವೇಶ ಮಾಡಿಲ್ಲ . ನಾನು ಹೇಳಿದ ಕಾರಣಕ್ಕೆ ನನ್ನ ಅಣ್ಣನಿಗೆ ಯಾವುದೇ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ಸತಾಯಿಸುವ ಉದ್ದೇಶಕ್ಕೆ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ